ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 17-11-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳ ವಿಭಾಗ ಹಾಗೂ ಅಂತರ್ಜಾಲ ಸಂಪರ್ಕ ಸೇವಾ ಕೇಂದ್ರ ಪ್ರಾರಂಭ:<br><br>ಉದ್ಘಾಟನೆ:<br><br>ಶ್ರೀ ಶ್ರೀನಿವಾಸನ್ ಸುಬ್ಬಣ್ಣ ಚೆಟ್ಟಿಯಾರ್,<br><br>ಮುಖ್ಯ ಅತಿಥಿಗಳು:<br><br>ಶ್ರೀಮತಿ ಬಿ. ಟಿ. ಲಲಿತಾನಾಯಕ್,<br>ಮಾಜಿ ಸಚಿವರು | 18-11-2015<br>ಬುಧವಾರ<br>ಬೆಳಿಗ್ಗೆ<br>11-00 ಗಂಟೆಗೆ | ನಗರ ಕೇಂದ್ರ ಗ್ರಂಥಾಲಯ,<br>ಪೂರ್ವ ವಲಯ,<br>ಕಲ್ಯಾಣ ನಗರ ಶಾಖಾ ಗ್ರಂಥಾಲಯ,<br>6ನೇ ಎ ಮುಖ್ಯ ರಸ್ತೆ,<br>ಹೆಚ್.ಆರ್.ಬಿ.ಆರ್. ಬಡಾವಣೆ 2 ನೇ ಬ್ಲಾಕ್, ಪಿ.ಎಂ.ಆರ್. ಯುನಿವರ್ಸಿಟಿ ಹತ್ತಿರ,<br>ಕಲ್ಯಾಣ ನಗರ<br>ಬೆಂಗಳೂರು -43 |
| 2 | ಪತ್ರಿಕಾಗೋಷ್ಠಿ:<br><br>ಶ್ರೀಮತಿ ವರೋನಿಕಾ ಕರ್ನೆಲಿಯೋ<br>ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಅಧ್ಯಕ್ಷರು<br><br>ಶ್ರೀ ಎ.ಸಿ. ಕೇಶವಮೂರ್ತಿ,<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಅವರಿಂದ | 18-11-2015<br>ಬುಧವಾರ<br>ಬೆಳಿಗ್ಗೆ<br>11-30 ಗಂಟೆಗೆ | ನಂ. 27, ಇಂಡಸ್ಟ್ರಿಯಲ್ ಸಬರ್ಬ್,<br>ಬೆಂಗಳೂರು -ಪುಣೆ ಹೆದ್ದಾರಿ,<br>ರಾಜಾಜಿನಗರ, ಬೆಂಗಳೂರು-560 55<br>( ಕೆ.ಎಸ್.ಡಿ.ಎಲ್. ನ ಕಾರ್ಖಾನೆಯ ಸಭಾಂಗಣದಲ್ಲಿ ) |

| | | | |
|---|---|---|---|
| | | | |
| 3 | ಅಭಿನಂದನಾ ಸಮಾರಂಭ:<br>ಡಾ. ಎಂ. ವೀರಪ್ಪ ಮೊಯಿಲಿ.<br>ಸಂಸದರು, ಚಿಕ್ಕಬಳ್ಳಾಪುರ ಹಾಗೂ<br>ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರು<br>ಅವರಿಗೆ ಗೌರವ ಸಮರ್ಪಣೆ:<br><br>ಗೌರವ ಸಮರ್ಪಣೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ಅವರಿಂದ<br><br>ಘನ ಉಪಸ್ಥಿತಿ:<br>ಶ್ರೀ ಡಿ.ಹೆಚ್. ಶಂಕರಮೂರ್ತಿ,<br>ವಿಧಾನ ಪರಿಷತ್ತಿನ ಸಭಾಪತಿಗಳು<br><br>ಶ್ರೀ ಕಾಗೋಡು ತಿಮ್ಮಪ್ಪ,<br>ವಿಧಾನ ಸಭಾಧ್ಯಕ್ಷರು,<br><br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್ ಬೇಗ್,<br>ಮೂಲ ಸೌಕರ್ಯ, ಹಜ್ ಹಾಗೂ<br>ವಾರ್ತಾ ಸಚಿವರು<br><br>ಮುಖ್ಯ ಅತಿಥಿಗಳು:<br><br>ಶ್ರೀ ಕೆ.ಜೆ. ಜಾರ್ಜ್<br>ಬೆಂಗಳೂರು ಅಭಿವೃದ್ಧಿ ಮತ್ತು ನಗರ<br>ಯೋಜನಾ ಸಚಿವರು<br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ<br>ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ<br>ಮತ್ತು ಹಿರಿಯ ನಾಗರಿಕರ ಸಬಲೀಕರಣ<br>ಇಲಾಖೆ ಸಚಿವರು | **18–11–2015**<br>ಬುಧವಾರ<br>ಸಂಜೆ<br>**6–30** ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನ ಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ವಿಧಾನ ಸಭೆ: ಶಾಸಕ ಗುರುಪಾದಪ್ಪ ನಾಗಮಾರಪಲ್ಲಿ ನಿಧನಕ್ಕೆ ಸಂತಾಪ: ಸದನ ಮೂಂದೂಡಿಕೆ

ಬೆಂಗಳೂರು, ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)

ಇಂದು ಬೆಳಗಿನ ಜಾವ ನಿಧನರಾದ ಬೀದರ್ ಶಾಸಕ ಗುರುಮಾದಪ್ಪ ನಾಗಮಾರಪಲ್ಲಿ ಅವರ ನಿಧನಕ್ಕೆ ಇಂದು ವಿಧಾನ ಸಭೆ ತೀವ್ರ ಸಂತಾಪ ವ್ಯಕ್ತಪಡಿಸಿತು.

ಇಂದು ಬೆಳಿಗ್ಗೆ ಸದನ ಸಮಾವೇಶಗೊಳ್ಳುತ್ತಿದ್ದಂತೆ ರಾಜ್ಯ ವಿಧಾನ ಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ಅವರು ಗುರುಪಾದಪ್ಪ ನಾಗಮಾರಪಲ್ಲಿ ಅವರ ನಿಧನಕ್ಕೆ ಸಂತಾಪ ಸೂಚಕ ನಿರ್ಣಯ ಮಂಡಿಸಿದರು.

ನಿರ್ಣಯವನ್ನು ಬೆಂಬಲಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ  ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್,  ಬೃಹತ್ ಮತ್ತು ಮಧ್ಯಮ ಪ್ರಮಾಣ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ, ಸಹಕಾರ ಸಚಿವ ಹೆಚ್.ಎಸ್. ಮಹದೇವಪ್ರಸಾದ್, ಶಾಸಕರುಗಳಾದ ವೈ.ಎಸ್.ವಿ. ದತ್ತ, ಬಿ.ಆರ್. ಪಾಟೀಲ್, ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಭು ಚೌಹಾಣ್, ಸಿದ್ದುನ್ಯಾಮಗೌಡ, ಲಕ್ಷ್ಮಣ ಸವದಿ ಅವರುಗಳು ಮಾತನಾಡಿ ದಿವಂಗತ ಗುರುಪಾದಪ್ಪ ನಾಗಮಾರಪಲ್ಲಿ ಅವರ ಗುಣಗಾನ ಮಾಡಿದರಲ್ಲದೆ ಅವರು ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿದರು.

ನಂತರ ಸಭೆಯು ಮೃತರ ಆತ್ಮಕ್ಕೆ ಶಾಂತಿ ಕೋರಿ ಒಂದು ನಿಮಿಷ ಮೌನ ಆಚರಿಸಿತು.  ನಂತರ ವಿಧಾನ ಸಭಾಧ್ಯಕ್ಷರು ಸಭೆಯ ಕಾರ್ಯಕಲಾಪವನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಮುಂದೂಡಿದರು.

ಬಾಬು/ಕೆಎಂ

# ಸೋಲಾರ್ ಟೆಕ್ನಿಷಿಯನ್ ತರಬೇತಿಗೆ ನೋಂದಣಿ

ಬೆಂಗಳೂರು, ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ ಯುವತಿಯರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ ಉಚಿತ ಸೋಲಾರ್ ಟೆಕ್ನಿಷಿಯನ್ ತರಬೇತಿ ಶಿಬಿರವನ್ನು ದಿನಾಂಕ: 27-11-2015

ರಿಂದ 9-12-2015 ರವರೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಇಲಾಖೆಯ ರಾಜ್ಯ ಯುವ ಕೇಂದ್ರದಲ್ಲಿ ಹಮ್ಮಿಕೊಂಡಿದ್ದು, ನೋಂದಣಿ ಪ್ರಾರಂಭಿಸಿದೆ.

ತರಬೇತಿ ಶಿಬಿರವು 13 ದಿನಗಳ ಕಾಲ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ನಡೆಯಲಿದೆ. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಯುವಕ ಯುವತಿಯರಿಗೆ ಲಘು ಉಪಹಾರ ಒದಗಿಸಲಾಗುವುದು. ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ನೀಡಲಾಗುವುದಿಲ್ಲ. ಅಭ್ಯರ್ಥಿಗಳು 15 ರಿಂದ 35 ವರ್ಷದೊಳಗಿನವರಾಗಿರಬೇಕು. ಐಟಿಐ, ಡಿಪ್ಲೋಮೊ, ಡಿಗ್ರಿ ಪದವಿದರರಿಗೆ ಮೊದಲ ಆದ್ಯತೆ ನೀಡಲಾಗುವುದು. ಆಸಕ್ತ ಯುವಕ/ಯುವತಿಯರು ತಮ್ಮ ಜನ್ಮ ದಿನಾಂಕದ ದಾಖಲೆಯೊಂದಿಗೆ (ಎಸ್.ಎಸ್.ಎಲ್.ಸಿ.. ಅಂಕಪಟ್ಟಿ) ದಿನಾಂಕ: 24-11-2015 ರ ಒಳಗಾಗಿ ಸಹಾಯಕ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-1, ಇವರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 080-22214911/9880839295 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಪಲ್ಲವಿ/ ಕೆಎಂ

# District Judges exam results out

**Bangalore, November 17 (Karnataka Information)**

**The result of the written examination held on 30th August, 2015 for the post of District Judges by Direct Recruitment has been published in the official web-site of the High Court of Karnataka.**

**The candidates who appearead for the examination may know their results by visiting www.karnatakajudiciary.kar.nic.in**

**pallavi/km**

# ಮಕ್ಕಳ ಅಭಿವೃದ್ಧಿ, ರಕ್ಷಣೆ ಸರ್ಕಾರದ ಗುರಿ: ಸಿದ್ದರಾಮಯ್ಯ

ಬೆಂಗಳೂರು, ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)

ಮಕ್ಕಳ ಹಸಿವು, ಅಪೌಷ್ಠಿಕತೆಯನ್ನು ಹೋಗಲಾಡಿಸಲು ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ. ಅಕ್ಷರ ದಾಸೋಹ, ಕ್ಷೀರಭಾಗ್ಯ, ಕಬ್ಬಿಣಾಂಶದ ಮಾತ್ರೆಗಳು, ಹಾಲು, ಮೊಟ್ಟೆ ಮತ್ತು ಶುದ್ಧ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮಕ್ಕಳ ಸಂಸತ್ 15 ಮತ್ತು ರಾಜ್ಯ ಮುಖ್ಯಮಂತ್ರಿಗಳೊಂದಿಗೆ ಮಕ್ಕಳ ಸಮಾಲೋಚನೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಕ್ಕಳ ರಕ್ಷಣೆಗಾಗಿ ರಾಜ್ಯದಲ್ಲಿ ಹಲವಾರು ಯೋಜನೆಗಳಿವೆ. ಮಕ್ಕಳ ಸಹಾಯವಾಣಿ, ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕ, ರಾಜ್ಯಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು ಕರ್ತವ್ಯ ನಿರ್ವಹಿಸುತ್ತಿವೆ ಎಂದರು.

ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಬಾಲ್ಯ ವಿವಾಹ ನಿಷೇದ ಕಾಯ್ದೆಯಿಂದ ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹವನ್ನು ಕಡಿಮೆಯಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಮಕ್ಕಳ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರ ಪೋಕ್ಸೋ ಕಾಯ್ದೆ ಜಾರಿಗೆ ತಂದಿದೆ. ಸರ್ಕಾರ ಹೆಣ್ಣು ಮಕ್ಕಳಿಗಾಗಿ ಹಲವಾರು ಯೋಜನೆಗಳನ್ನು ಕೈಗೊಂಡಿರುವುದರಿಂದ ಕಳೆದ ದಶಕಕ್ಕೆ ಹೋಲಿಸಿದರೆ 0–6 ವರ್ಷದ ಲಿಂಗ ಪ್ರಮಾಣದಲ್ಲಿ ತುಸು ವಿಫಲವಾಗಿದೆ ಎಂದರು.

ಸರ್ಕಾರವು ಕೆಲವು ಶಾಲೆಗಳಲ್ಲಿ ಶೌಚಾಲಯ, ಕುಡಿಯವ ನೀರಿನ ವ್ಯವಸ್ಥೆ, ಬಿಸಿಯೂಟ, ಸಾರಿಗೆ ಉಚಿತ ಪ್ರವಾಸ, ಕಂಪ್ಯೂಟರ್, ಶಿಕ್ಷಣ ಗ್ರಂಥಾಲಯವನ್ನು ಸಹ ವ್ಯವಸ್ಥೆ ಮಾಡಿದೆ ಎಂದರು.

ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ಕಾರ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ. ಹೆಚ್.ಐ.ವಿ. ಪೀಡಿತ ಮಕ್ಕಳಿಗೆ ಸ್ಕಾಲರ್‌ಶಿಫ್ ನೀಡುತ್ತಿದೆ ಮತ್ತು ಅವರ ಆರೋಗ್ಯ ಸುಧಾರಿಸಲು ಕ್ರಮಕೈಗೊಂಡಿದೆ ಎಂದು ಸಹಾ ಅವರು ತಿಳಿಸಿದರು.

ಅನಾಥ ಮಕ್ಕಳ ಪುನರ್ವಸತಿಗೆ ಅನಾಥಾಶ್ರಮಗಳ ವ್ಯವಸ್ಥೆ ಮತ್ತು ಶಿಕ್ಷಣಕ್ಕಾಗಿ ಹೆಚ್ಚು ಅವಕಾಶವನ್ನು ಕಲ್ಪಿಸಲಾಗಿದೆ ಎಂದರು. ಈ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಉಮಾಶ್ರೀ, ಲೋಕೋಪಯೋಗಿ ಸಚಿವ ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಆರ್.ವಿ. ವೆಂಕಟೇಶ್, ಐವಾನ್ ಡಿಸೋಜ, ಲಕ್ಷ್ಮೀನಾರಾಯಣ ಮತ್ತು ಇತರೆ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಶಾಲೆಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು ಉಪಸ್ಥಿತರಿದ್ದು ಚರ್ಚಿಸಿದರು.

ಪಲ್ಲವಿ/ಕೆಪಿಪಿ/ಕೆಎನ್‌ವಿ/ಕೆಎಂ

## ಸರ್ಕಾರಕ್ಕೆ ಕೆ.ಎಸ್.ಡಿ.ಎಲ್ ಸಂಸ್ಥೆಯ ಆರು ಕೋಟಿ ರೂ ಚೆಕ್ ಹಸ್ತಾಂತರ

ಬೆಂಗಳೂರು, ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)

**ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆ ತನ್ನ ಲಾಭಾಂಶದಲ್ಲಿನ 6 ಕೋಟಿ ರೂ. (ಡಿವಿಡೆಂಟ್) ಹಣದ ಚೆಕ್ಕನ್ನು ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50 ಲಕ್ಷ ರೂ.ಗಳ ಚೆಕ್ಕನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿತು. ಸಚಿವರಾದ ಆರ್.ವಿ. ದೇಶಪಾಂಡೆ, ಕರ್ನಾಟಕ ಸಾಬೂನು ಮಾರ್ಜಕ ಸಂಸ್ಥೆಯ ಅಧ್ಯಕ್ಷರಾದ ವೆರೋನಿಕ ಕರ್ನೆಲಿಯೋ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಅಪರ ಕಾರ್ಯದರ್ಶಿಗಳು ಆದ ಅದ ರತ್ನಪ್ರಭ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಸಿ. ಕೇಶವಮೂರ್ತಿ ಅವರು ಹಾಜರಿದ್ದರು.**

**ಮಮತ/ಕೆಪಿಪಿ/ಕೆಎಂ**

## ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಸಾರ್ವಜನಿಕ ಬಹಿರಂಗ ವಿಚಾರಣೆ

**ಬೆಂಗಳೂರು, ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ವಿವಿಧ ಜಾತಿ ಜನಾಂಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಹೊಸದಾಗಿ ಸೇರಿಸಲು, ಪ್ರವರ್ಗ ಬದಲಾವಣೆಗೆ ಪರ್ಯಾಯ ಪದ ಸೇರ್ಪಡೆಗೆ ಮತ್ತು ಕಾಗುಣಿತ ದೋಷ ತಿದ್ದುಪಡಿಗೆ ಸಂಬಂಧಿಸಿದಂತೆ ಅಫಿಡವಿಟ್ ಮೂಲಕ ಸ್ವೀಕರಿಸಿರುವ/ಸ್ವೀಕರಿಸುವ ಮನವಿಗಳ ಬಗ್ಗೆ ಶಿವಮೊಗ್ಗದಲ್ಲಿ ದಿನಾಂಕ: 19-11-2015, ಚಿಕ್ಕಮಗಳೂರಿನಲ್ಲಿ ದಿನಾಂಕ 20-11-2015 ಮತ್ತು ಹಾಸನ ಜಿಲ್ಲೆಯಲ್ಲಿ ದಿನಾಂಕ: 21-11-2015 ರಂದು ಬಹಿರಂಗ ವಿಚಾರಣೆಯನ್ನು ನಡೆಸಲಿದೆ.

ಮಮತ/ಕೆಎಂ